# ದೂರವಾಗಲು ಕಾರಣ

- ಕೆಲಸದ ಒತ್ತಡ
- ಗಂಡ-ಹೆಂಡತಿ ಕಡಿಮೆ ಸಮಯ ಜತೆಯಲ್ಲಿ ಇರುವುದು
- ಪತಿ, ಪತ್ನಿ ಮತ್ತೊಬ್ಬರ ಜತೆ ಹೊಂದುವ ಅನೈತಿಕ ಸಂಬಂಧ
- ಪತಿ-ಪತ್ನಿ ಇಬ್ಬರಲ್ಲೂ ಆರ್ಥಿಕ ಸ್ಥಿರತೆ
- ನಗರೀಕರಣ
- ಪತಿ, ಪತ್ನಿ ಪರಸ್ಪರ ಮನವೊಲಿಕೆಗೆ ಸಿದ್ದವಿಲ್ಲದಿರುವುದು.
- ಮದುವೆ ಬಾಂಧವ್ಯವನ್ನು ಆದಷ್ಟು ಬೇಗ ಮುರಿದುಕೊಳ್ಳಬೇಕೆಂಬ ಆತುರ
- ಮಾನಸಿಕ ಮತ್ತು ದೈಹಿಕ ಕಿರುಕುಳ, ತಾಳ್ಮೆ ಇಲ್ಲದಿರುವುದು, ಹೊಂದಾಣಿಕೆ ಸ್ವಭಾವದ ಸಮಸ್ಯೆಗಳು
- ಮದುವೆಗೆ ಮುನ್ನ ತಮ್ಮ ಆಶೋತ್ತರಗಳ ಬಗ್ಗೆ ಪರಸ್ಪರ ಚರ್ಚಿಸದಿರುವುದು
- ಅನುಮಾನ

# ಹಿಂದೂ ಕಾಯ್ದೆ ಪ್ರಕಾರ

- ದ್ವಿಪತ್ನಿತ್ವ
- ಪತಿ ಅಥವಾ ಪತ್ನಿ ತನ್ನ ಸಂಗಾತಿ ಮೇಲೆ ನಡೆಸುವ ಕ್ರೌರ್ಯ
- ಮತ್ತೊಂದು ಧರ್ಮಕ್ಕೆ ಮತಾಂತರ
- ಮಾನಸಿಕ ಸ್ಥಿಮಿತ ಕಳೆದುಕೊಳ್ಳುವುದು
- ಪರಸ್ಪರರ ಒಪ್ಪಿಗೆ

# ವಿಚ್ಛೇದನಕ್ಕೆ ಒಪ್ಪಿದರೆ....



ಆಗಲೂ ವಿಚ್ಛೇದನ ಬಗ್ಗೆ ತೀರ್ಪು ಹೊರಬೀಳಲು 8-9 ತಿಂಗಳು ಬೇಕು. ಯಾಕೆಂದರೆ, ಹಿಂದೂ ವಿವಾಹ ಕಾಯ್ದೆ ಪ್ರಕಾರ ಪತಿ-ಪತ್ನಿ ಇಬ್ಬರೂ ವಿಚ್ಛೇದನಕ್ಕೆ ಒಪ್ಪಿದರೂ ಕಾಯ್ದೆ ಪ್ರಕಾರ ಆರು ತಿಂಗಳು ಕಾಯಬೇಕಾಗುತ್ತದೆ. ಆರು ತಿಂಗಳ ನಂತರ ದಂಪತಿಯನ್ನು ನ್ಯಾಯಾಲಯ ಮತ್ತೆ ಕರೆಯುತ್ತದೆ. ದಂಪತಿ ರಾಜಿಗೆ ಸಿದ್ದರಿಲ್ಲ ಎಂಬುದು ಕೋರ್ಟ್‌ಗೆ ಮನವರಿಕೆಯಾದರೆ ವಿಚ್ಛೇದನ ನೀಡುತ್ತದೆ.

# ಅಮೆರಿಕ ನೀಡಿದ ಎಚ್ಚರಿಕೆ

ಕುಟುಂಬದಲ್ಲಿ ತಂದೆ-ತಾಯಿಯ ಪ್ರೀತಿ, ವಾತ್ಸಲ್ಯ, ಆರೈಕೆಯಲ್ಲಿ ಬೆಳೆದ ಮಗುವಿಗಿಂತ ತಂದೆಯ ಪ್ರೀತಿ ಕಳೆದುಕೊಂಡ ಮಗು ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆ ಐದು ಪಟ್ಟು ಹೆಚ್ಚು, ಮನೆಯಿಂದ ಓಡಿ ಹೋಗುವ ಸಾಧ್ಯತೆ 32 ಪಟ್ಟು, ವರ್ತನೆಯಲ್ಲಿ ಬದಲಾವಣೆ ಸಾಧ್ಯತೆ 20 ಪಟ್ಟು, ಅತ್ಯಾಚಾರ ಆರೋಪದಲ್ಲಿ ಸಿಕ್ಕಿ ಬೀಳುವ ಸಾಧ್ಯತೆ 14 ಪಟ್ಟು, ಹೈಸ್ಕೂಲ್ ವಿದ್ಯಾಭ್ಯಾಸದಲ್ಲೇ ಶಿಕ್ಷಣ ಮೊಟಕುಗೊಳಿಸುವ ಸಾಧ್ಯತೆ 9 ಪಟ್ಟು, ಮಾದಕ ವ್ಯಸನಗಳಿಗೆ ತುತ್ತಾಗುವುದು 10 ಪಟ್ಟು ಅಧಿಕ.

# ಐಪಿಸಿ 498 ಎ ಹೇಳುವುದೇನು?

ಇದು ವರದಕ್ಷಿಣೆ ಕಿರುಕುಳದ ಆರೋಪ. ಭಾರತದ ಸಂಸತ್ 1983ರಲ್ಲಿ ಈ ಮಸೂದೆಗೆ ಒಪ್ಪಿಗೆ ನೀಡಿತು. ಪತ್ನಿಗೆ ಆತನ ಪತಿ ಅಥವಾ ಸಂಬಂಧಿಕರು ಹಿಂಸೆ ನೀಡಿದರೆ ಮೂರು ವರ್ಷದವರೆಗೂ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಬಹುದು.